# ಅಂಬೇಡ್ಕರ್: ಮೀಸಲಾತಿ

**ದೊಡ್ಡನಾಯ್ಕ ಹೆಚ್.**

ಉಪನ್ಯಾಸಕರು, ಕನ್ನಡ ವಿಭಾಗ, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಶಿವಮೊಗ್ಗ.

**DOI: https://doi.org/10.5281/zenodo.15504187**

## ABSTRACT:

ಬಾಬಾ ಸಾಹೇಬ್ ಅಂಬೇಡ್ಕರ್ ಭಾರತ ಕಂಡ ಮಹಾನ್ ಮಾನವತವಾದಿ. ಭಾರತದಲ್ಲಿದ್ದ ವರ್ಣ, ವರ್ಗ ಮತ್ತು ಜಾತಿ ವ್ಯವಸ್ಥೆಯನ್ನು ಬುಡ ಸಮೇತ ನಾಶ ಮಾಡದ ಹೊರತು, ಭಾರತದ ಸಮಾಜ ಸುಧಾರಣೆಗೊಳ್ಳಲು ಸಾಧ್ಯವಿಲ್ಲವೆಂದು ಹೇಳಿದ ಸಮಾಜ ಸುಧಾರಕರು. ಸಾಮಾಜಿಕ ಸ್ತರಗಳ ಮೂಲಕ ಇದ್ದ ತಾರತಮ್ಯವನ್ನು ಹೋಗಲಾಡಿಸಲು ಜನಸಾಮಾನ್ಯರಲ್ಲಿ ವಿಚಾರಧಾರೆಗಳನ್ನು ಕಟ್ಟಿಕೊಟ್ಟ ಮಹಾನ್ ವಿಚಾರವಾದಿ. ಹೀಗಾಗಿಯೇ ಬಾಬಾ ಸಾಹೇಬರು ಭಾರತೀಯ ಸಮಾಜದ ಪ್ರಗತಿಯು ಸಮಾನತೆಯಲ್ಲಿ ಅಡಗಿದೆ ಎಂದು ಬಲವಾಗಿ ನಂಬಿದ್ದರು. ವರ್ಣಗಳು ಪುರುಷನಿಂದ, ಮನುವಿನಿಂದ, ಪ್ರಜಾಪತಿಯಿಂದ, ವಾರ್ತ್ ನಿಂದ ಮತ್ತು ಸೋಮನಿಂದ ಹುಟ್ಟಿವೆ ಎಂದು ವೇದಗಳು ಪ್ರತಿಪಾದಿಸುತ್ತವೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳು ಋಗ್ವೇದದಲ್ಲಿ ಪ್ರತಿಪಾದಿತವಾಗಿದೆ. ವರ್ಣ ವ್ಯವಸ್ಥೆಯ ಹುಟ್ಟಿನ ಕುರಿತು ಎಷ್ಟು ಚರ್ಚೆಗಳಿವೆಯೋ ಅಷ್ಟೇ ವರ್ಣಾಶ್ರಮ ವ್ಯವಸ್ಥೆಯ ಸಂಖ್ಯೆಯ ಬಗ್ಗೆಗಿನ ಚರ್ಚೆಗಳು ಇವೆ.

ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಶೂದ್ರರನ್ನು ಅತ್ಯಂತ ಹೀನವಾಗಿ ಕಾಣಲಾಗುತ್ತಿತ್ತು. ಸಾರ್ವಜನಿಕ ದೇವಾಲಯವನ್ನು ಅವರು ಪ್ರವೇಶಿಸುವಂತಿರಲಿಲ್ಲ. ಸಾರ್ವಜನಿಕ ಕೆರೆಕಟ್ಟೆಗಳ ನೀರನ್ನು ಮುಟ್ಟುವಂತಿರಲಿಲ್ಲ. ಕೃಷಿಯನ್ನು ಮಾಡುವಂತಿರಲಿಲ್ಲ. ಅವರದೆಂದು ಹೇಳಿಕೊಳ್ಳಲಿಕ್ಕೆ ಸ್ವಂತ ವಸ್ತುವನ್ನು ಇಟ್ಟುಕೊಳ್ಳುವಂತಿರಲಿಲ್ಲ. ಓದು ಕಲಿಕೆ, ಮಾತು, ಅಭಿವ್ಯಕ್ತಿ, ಹೋರಾಟ, ಪ್ರತಿಭಟನೆ ಮತ್ತು ನ್ಯಾಯ ಕೇಳುವ ಹಕ್ಕು ಸಾಧ್ಯವೇ ಇರಲಿಲ್ಲ. ಮನುಷ್ಯ ಮನುಷ್ಯರ ನಡುವೆ ಇರುವ ಈ ತಾರತಮ್ಯ ಬಾಬಾ ಸಾಹೇಬರ ಹೃದಯವನ್ನು ಕಲುಕಿತು. ಅದಕ್ಕಾಗಿ ಬಾಬಾ ಸಾಹೇಬರು ಸಾಮಾಜಿಕ ನ್ಯಾಯದ ಹೋರಾಟದ ಪರಿವರ್ತನೆಯ ಬಾಗಿಲನ್ನು ತೆರೆದರು. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಅಸ್ಪೃಶ್ಯತಾ ಆಚರಣೆಯನ್ನು ವಿರೋಧಿಸಿ 'ಬಹಿಷ್ಕೃತ ಹಿತಕಾರಣಿ' ಎಂಬ ಸಂಘಟನೆಯನ್ನು ಸ್ಥಾಪಿಸಿದರು. ಅಸ್ಪೃಶ್ಯ ಎಂದು ಕರೆದು ಎಲ್ಲಾ ಸೌಲಭ್ಯಗಳಿಂದ ದೂರವಿಟ್ಟಿದ್ದನ್ನು ಸಾರ್ವಜನಿಕ ವಲಯಗಳಲ್ಲಿ ಪ್ರಶ್ನಿಸುವಂತೆ ಮಾಡಲಾಯಿತು. ದಲಿತರಿಗೆ ವಿಶೇಷ ಸೌಲಭ್ಯಕ್ಕಾಗಿ ಅವರು ನಡೆಸಿದ ಹೋರಾಟವೇ ಆಧುನಿಕ ಮೀಸಲಾತಿಯ ಹೋರಾಟವಾಗಿ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ.

## KEYWORDS:

ಬಿ. ಆರ್. ಅಂಬೇಡ್ಕರ್, ಮೀಸಲಾತಿ, ಬಡ್ತಿ ಮೀಸಲಾತಿ, ಮುಂಬಡ್ತಿ, ಒಳ ಮೀಸಲಾತಿ, ಕೆನೆ ಪದರ, ಸಂವಿಧಾನ.

ಅಂಬೇಡ್ಕರ್ ಅವರು ಸೈಮನ್ ಸಮಿತಿಯ ಮುಂದೆ ದಲಿತರ ಬಗ್ಗೆ ಶತಶತಮಾನಗಳಿಂದ ನಡೆಯುತ್ತಿರುವುದು ದೌರ್ಜನ್ಯವನ್ನು ಮನ ಕರಗುವಂತೆ ಪ್ರತಿಪಾದಿಸಿದ್ದಾರೆ. ಬ್ರಿಟಿಷರ ಅವಧಿಯಲ್ಲಿ ದಲಿತರಿಗೆ ರಾಜಕೀಯ ಪ್ರಾತಿನಿಧ್ಯ ಸಿಗುವಂತೆ ಹೋರಾಟಗಳನ್ನು ರೂಪಿಸಿದರು. 1930 ನವೆಂಬರ್ 12ರಂದು ಮೊದಲ ದುಂಡು ಮೇಜಿನ ಪರಿಷತ್ತು ದಲಿತರಿಗೆ ಇದೊಂದು ಚರಿತ್ರಾರ್ಹ ಸಮ್ಮೇಳನ. ಈ ಸಮ್ಮೇಳನದಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್, ದಿವಾನ್ ಬಹದ್ದೂರ್ ಮತ್ತು ಆರ್ ಶ್ರೀನಿವಾಸನ್ ಇತ್ಯಾದಿ ಮಹಾನ್ ವ್ಯಕ್ತಿಗಳು ದಲಿತರ ಪ್ರತಿನಿಧಿಗಳಾಗಿ ಭಾಗವಹಿಸಿದ್ದರು. ಹೀಗಾಗಿ ಈ ಸಮ್ಮೇಳನವು ದಲಿತರಿಗೆ ಮೊಟ್ಟ ಮೊದಲ ಬಾರಿಗೆ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಿತು.

ನಿಮ್ನ ವರ್ಗದವರಿಗೆ ಪ್ರತ್ಯೇಕ ಚುನಾವಣಾ ವಿದೇಯಕದ ಅವಕಾಶವನ್ನು ಕಲ್ಪಿಸಿ ಬ್ರಿಟಿಷ್ ಸರ್ಕಾರ 1932 ಆಗಸ್ಟ್ 17ರಂದು ತನ್ನ ತೀರ್ಮಾನವನ್ನು ಪ್ರಕಟಿಸಿತು. ಬಹು ದಿನಗಳಿಂದ ಶಾಸಕಾಂಗದಲ್ಲಿ ಸಾಕಷ್ಟು ಪ್ರಾತಿನಿಧ್ಯ ಹೊಂದುವುದು ಸಾಧ್ಯವಾಗುವುದಿಲ್ಲವಾದ್ದರಿಂದ ಅವರಿಗೆ ಕೆಲವು ವಿಶೇಷ ಸ್ಥಾನಗಳನ್ನು ನಿಗದಿಪಡಿಸಲಾಯಿತು. ಇದರಿಂದ ವಿಶೇಷ ಮತ ಕ್ಷೇತ್ರದಲ್ಲಿ ಮತದಾನ ಮಾಡುವ ಯಾವುದೇ ವ್ಯಕ್ತಿ ಸಾಮಾನ್ಯ ಮತ ಕ್ಷೇತ್ರದಲ್ಲಿಯೂ ಮತದಾನ ಮಾಡುವ ಹಕ್ಕು ಪಡೆದನು. ಇದರ ಜೊತೆಗೆ ಪೂರ್ಣ ಒಪ್ಪಂದವು ದಲಿತರ ಭವಿಷ್ಯಕ್ಕೆ ರೂಪಿಸಿದ ಯೋಜನೆಯಾಗಿತ್ತು. ಹೀಗಾಗಿ ದಲಿತರು ಸ್ವಾಭಿಮಾನದಿಂದ ಮತದಾನದ ತಮ್ಮ ಹಕ್ಕನ್ನು ಚಲಾಯಿಸಿದರು.

ಮೈಸೂರು ಸಂಸ್ಥಾನದಲ್ಲಿ ಮದ್ರಾಸ್ ಆಂಧ್ರ ಬ್ರಾಹ್ಮಣರುಗಳೇ ತುಂಬಿಕೊಂಡಿದ್ದ ಕಾಲದಲ್ಲಿ ಕರ್ನಾಟಕದ ಬ್ರಾಹ್ಮಣರು 'ಮೈಸೂರು ಬ್ರಾಹ್ಮಣರು ಮೈಸೂರಿನವರಾಗಿಯೇ' ಎಂಬ ಘೋಷಣೆ ಮಾಡಿ ಹೋರಾಟವನ್ನು ಆರಂಭಿಸಿದರು. ಇದರ ಪರಿಣಾಮ ಮೈಸೂರು ಬ್ರಾಹ್ಮಣರಿಗೆಂದು ಕೆಲವು ಸ್ಥಾನಗಳನ್ನು ಮೀಸಲಿಡಲಾಯಿತು. ಬ್ರಾಹ್ಮಣ ಬ್ರಾಹ್ಮಣರಲ್ಲಿಯೇ ಮೀಸಲಾತಿಗಾಗಿ ಹೋರಾಟ ನಡೆದದ್ದು ಇತಿಹಾಸ. ಮೀಸಲಾತಿಯಿಂದ ಪ್ರತಿಭಾ ಪಲಾಯನವಾಗುತ್ತದೆ ಎಂದು ಬ್ರಾಹ್ಮಣರು ಒಂದು ಕಾಲದಲ್ಲಿ ತಮ್ಮ ನಡುವೆ ಮೀಸಲಾತಿ ಬೇಕೆಂದು ಹೋರಾಡಿದರ ಬಗ್ಗೆ ಜನರಿಗೆ ಗೊತ್ತಿರಲಿಕ್ಕಿಲ್ಲ. ಆಡಳಿತ ಕ್ಷೇತ್ರದಲ್ಲಿ ಬ್ರಾಹ್ಮಣರೆ ತುಂಬಿಕೊಂಡಾಗ ಒಕ್ಕಲಿಗ ಲಿಂಗಾಯತ ಸಮುದಾಯಗಳು ಸ್ಥಳೀಯ ಸಂಘ ಸಂಸ್ಥೆಗಳು ಮತ್ತು ಆಡಳಿತದಲ್ಲಿ ತಮಗೂ ಮೀಸಲಾತಿ ಬೇಕೆಂದು ಹೋರಾಟವನ್ನು ಪ್ರಾರಂಭಿಸುತ್ತಾರೆ. ಬ್ರಾಹ್ಮಣ ಬ್ರಾಹ್ಮಣೇಯರ ಸಮುದಾಯಕ್ಕೆ ಉದ್ಯೋಗದಲ್ಲಿ ಮೀಸಲಾತಿ ಅಗತ್ಯವನ್ನು ಮನಗಂಡ ನಾಲ್ವಡಿ ಕೃಷ್ಣರಾಜ ಒಡೆಯರವರು ಬ್ರಿಟಿಷ್ ನ್ಯಾಯಾಧೀಶ ಸರ್ ವೆಸ್ಲಿ ಮಿಲ್ಲರ್ ನೇತೃತ್ವದಲ್ಲಿ ಮಿಲ್ಲರ್ ಆಯೋಗವನ್ನು ರಚಿಸಿದರು. ಈ ಸಮಿತಿಯ ಶಿಫಾರಸಿನಂತೆ

ಬ್ರಾಹ್ಮಣೇತರರಿಗೆ ಶೇಕಡ 75 ಮೀಸಲಾತಿಯನ್ನು ಘೋಷಿಸಿದರು. ಕರ್ನಾಟಕದ ಇತಿಹಾಸದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ತೆಗೆದುಕೊಂಡ ನಿರ್ಧಾರ. ಅವಿಸ್ಮರಣೀಯವಾದದ್ದು. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕು 77 ವರ್ಷ ಕಳೆದರೂ ಇನ್ನೂ ಸಮಾನತೆ ಬರಲಿಲ್ಲ. ಸಂವಿಧಾನವನ್ನು ವಿರೋಧಿಸಿಕೊಂಡು, ಅವಮಾನಿಸಿಕೊಂಡು ಬದುಕುವ ಶ್ರೇಷ್ಠತೆಯ ವ್ಯಸನ ಈ ದೇಶದಿಂದ ಇನ್ನೂ ದೂರವಾಗಿಲ್ಲ.

ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಭಾರತ ಕಂಡ ಸರ್ವ ಶ್ರೇಷ್ಠ ಪ್ರತಿಭೆಗಳಲ್ಲಿ ಅಗ್ರಮಾನ್ಯರು. ಇಷ್ಟೇ ಅಲ್ಲದೆ ರಾಜಕೀಯ ತಜ್ಞರು, ಕಾನೂನು ತಜ್ಞರು, ತತ್ವಜ್ಞಾನಿಗಳು, ಆರ್ಥಿಕ ಚಿಂತಕರು, ದಲಿತರ ಸಾಮಾಜಿಕ ನ್ಯಾಯದ ಹೋರಾಟಗಾರರು, ಕರುಡು ಸಮಿತಿಯ ಅಧ್ಯಕ್ಷರು ಆಗಿದ್ದರು. ಒಬ್ಬ ದಲಿತನಿಗೆ ಓದಲಿಕ್ಕೆ ಅವಕಾಶ ಕೊಟ್ಟರೆ ಹೇಗೆ ಓದಬಹುದು ಏನು ಓದಬಹುದು ಎಷ್ಟು ಓದುತ್ತಾರೆ ಎನ್ನುವುದನ್ನು ಅಂಬೇಡ್ಕರ್ ಅವರು ತೋರಿಸಿಕೊಟ್ಟಿದ್ದಾರೆ. ಇವರ ಹಾಗೆ ಹಿಂದೆ ಯಾರು ಓದಿಲ್ಲ ಮುಂದು ಯಾರೂ ಓದುವುದಿಲ್ಲ ಅನ್ಸುತ್ತದೆ. ಇವರ ಓದಿಗೆ ಇವರೇ ಸರಿಸಾಟಿ.

ಭಾರತದಂತಹ ವೈವಿಧ್ಯಮಯ ರಾಷ್ಟ್ರದಲ್ಲಿ ಎಲ್ಲರಿಗೂ ಅನುಕೂಲಕಾರಿ ಸಂವಿಧಾನವನ್ನು ರಚನೆ ಮಾಡುವುದು ಅಷ್ಟು ಸುಲಭವಾಗಿರಲಿಲ್ಲ. ಅದರಲ್ಲೂ ಬಾಬಾ ಸಾಹೇಬ್ ಅಂಬೇಡ್ಕರ್ ರು ದಲಿತರ ಆರ್ಥಿಕ, ಸಾಮಾಜಿಕ, ರಾಜಕೀಯ ಹಿತ ರಕ್ಷಣೆಗೆ ಕಟಿ ಬದ್ಧರಾಗಿ ಹಲವಾರು ಉಪಯುಕ್ತ ವಿಧಿಗಳನ್ನು ಸಂವಿಧಾನದಲ್ಲಿ ಸೇರ್ಪಡೆ ಮಾಡಿದ್ದಾರೆ. ಸಂವಿಧಾನದ ವಿಧಿ 330 ರ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ವಿಶೇಷ ಪ್ರತಿನಿಧ್ಯವನ್ನು ಕಲ್ಪಿಸಿಕೊಡಲಾಗಿದೆ. ಅದರ ಪ್ರಕಾರ ಸ್ವತಂತ್ರ ಭಾರತ ಲೋಕಸಭೆಯ ಒಟ್ಟು ಸದಸ್ಯರ ಸಂಖ್ಯೆ 544 ರಲ್ಲಿ ಪರಿಶಿಷ್ಟ ಜಾತಿಗೆ 79 ಸ್ಥಾನವನ್ನು, ಪರಿಶಿಷ್ಟ ಪಂಗಡದವರಿಗೆ ಮೀಸಲಿಡಲಾಗಿದೆ. ಸಾರ್ವಜನಿಕ ವಿಷಯಗಳಲ್ಲಿ ತೆರಿಗೆ ಪ್ರತಿನಿತ್ಯ ಕೊಡುವಾಗ ಅಂಬೇಡ್ಕರ್ ಅವರಿಗೆ ಅರಿವಿತ್ತು. ಸಂವಿಧಾನದ ಪರಿಚ್ಛೇದ 16 ರ ಪ್ರಕಾರ ಸಾರ್ವಜನಿಕ ಸೇವೆಗೆ ಎಲ್ಲಾ ಭಾರತೀಯರು ಅರ್ಹರು. ಉದ್ಯೋಗಾವಕಾಶಕ್ಕೆ ಜಾತಿ, ಧರ್ಮ, ಜನಾಂಗ ಮತ್ತು ಲಿಂಗ ತಾರತಮ್ಯ ಮಾಡುವಂತಿಲ್ಲ. ಪರಿಚ್ಛೇದ 16 (4) ಯ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗದವರ ಉದ್ಯೋಗದಲ್ಲಿ ಮುಂಬಡ್ತಿ ಪಡೆಯಲು ಮೀಸಲಾತಿ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಸಂವಿಧಾನ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಿ ಅದಕ್ಕೆ 10 ವರ್ಷ ಅವಧಿ ನಿಗದಿಪಡಿಸಿತು. ಆದರೆ 10 ವರ್ಷಗಳ ನಂತರ ದಲಿತರ ಬದುಕಿನ ಅಭಿವೃದ್ಧಿ ಸಮೀಕ್ಷೆ ನಡೆಸಿ ಅದನ್ನು ಮುಂದುವರಿಸುವ ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳಲು

ಅವಕಾಶ ಕಲ್ಪಿಸಿತು. ಸಂವಿಧಾನ ಭಾರತದಲ್ಲಿ ಜಾರಿಗೆ ಬಂದ ಮೇಲೆ ದಲಿತ ಮತ್ತು ದಲಿತೇತರರಿಗೂ ನ್ಯಾಯೋಚಿತವಾದ ಮೀಸಲಾತಿ ಸೌಲಭ್ಯ ದೊರೆಯಿತು. ಕೆಳ ವರ್ಗದವರಿಗೆ ಸಂವಿಧಾನ ಮೀಸಲಾತಿ ಕಲ್ಪಿಸಿ ಕೊಟ್ಟು ಸರಿ ಸುಮಾರು 70 ವರ್ಷಗಳು ಕಳೆದವು. ಆದರೆ ಎಂದಿಗೂ ಮೀಸಲಾತಿ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಂಡಿಲ್ಲ. ಮೀಸಲಾತಿ ಪ್ರತಿರೋಧದ ನಡುವೆಯೂ ಮೀಸಲಾತಿಯಿಂದ ದಲಿತರು ಸಾರ್ವಜನಿಕರ ವಲಯವನ್ನು ಪ್ರವೇಶಿಸುವಂತೆ ಆಗಿರಬಹುದು ಸತ್ಯ. ಪ್ರಾಬಲ್ಯ ಇರುವವರಿಂದ ದಲಿತರಿಗೆ ಮೀಸಲಾತಿಯಿಂದ ಸಿಗುವ ಒಂದೆರಡು ಸ್ಥಾನಗಳು ಪ್ರವೇಶಿಸಿದ ಹಂತದಲ್ಲಿ ನೆಲೆ ನಿಲ್ಲುವಂತಾದರೆ ಮೀಸಲಾತಿ ಉದ್ದೇಶ ಈಡೇರಿದಂತಾಗುವುದಿಲ್ಲ. ಮೀಸಲಾತಿಯ ಮುಂದುವರಿಕೆಯೇ ಬಡ್ತಿ ಮೀಸಲಾತಿ, ಒಳ ಮೀಸಲಾತಿ ಮತ್ತು ಕೆನೆ ಪದರು. ಬಡ್ತಿ ಮೀಸಲಾತಿಗೆ ಸಂವಿಧಾನದಲ್ಲಿ ಅವಕಾಶವಿದೆ.

ಸಂವಿಧಾನದ 16(4) ನೇ ಪರಿಚ್ಛೇದದಲ್ಲಿ ದಲಿತರ ಬಡ್ತಿ ಮೀಸಲಾತಿಯನ್ನು ವಿವರಿಸಿದೆ. 1978 ಏಪ್ರಿಲ್ 27 ರ ಸರ್ಕಾರಿ ಆದೇಶ ಪ್ಯಾರ್ ಆರರಲ್ಲಿ ಸರ್ಕಾರದ ಈ ಆದೇಶದಲ್ಲಿ ಪರಿಶಿಷ್ಟ ಜಾತಿಗೆ ಶೇಕಡ 15 ಪರಿಶಿಷ್ಟ ಪಂಗಡಕ್ಕೆ ಶೇಕಡ 3 ಬಡ್ತಿ ಮೀಸಲಾತಿ ನೀಡುವಂತೆ ಆದೇಶ ಹೊರಡಿಸಿದೆ. ಅವಕಾಶ ವಂಚಿತ ದಲಿತರಿಗಾಗಿ ಬಡ್ತಿ ಮೀಸಲಾತಿಯನ್ನು ನೀಡಬೇಕು ಮತ್ತು ಅದನ್ನು ಬ್ಯಾಕ್ಲಾಗ್ ಎಂದು ಪರಿಗಣಿಸಬೇಕೆಂದು ಆದೇಶವಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಬ್ಯಾಕ್ಲಾಗಿನ ಮಾನದಂಡಗಳು ಬದಲಾದಂತೆ ಕಾಣುತ್ತಿವೆ. ಕೆಲವು ಕಡೆ ವಯಸ್ಸಿಗೆ ಆದ್ಯತೆ ನೀಡಿದರೆ, ಮತ್ತೆ ಕೆಲವು ಕಡೆ ಪಿಜಿಯಲ್ಲಿ ಪಡೆದ ಒಟ್ಟು ಅಂಕಗಳನ್ನು ಪರಿಗಣಿಸುತ್ತಿದ್ದಾರೆ. ಯಾವುದು ಸರಿ ಎನ್ನುವುದು ನಮ್ಮ ಮುಂದಿರುವ ಪ್ರಶ್ನೆ. ಇತ್ತೀಚಿನ ದಿನಮಾನಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಪರಿಶಿಷ್ಟ ಜಾತಿಗಳಲ್ಲಿನ ಒಳ ಮೀಸಲಾತಿಯ ಕುರಿತು ನೀಡಿರುವ ಹೇಳಿಕೆಯನ್ನು ಅಥವಾ ತೀರ್ಪನ್ನು ಕೆಲವು ಸಮುದಾಯಗಳು ತಮ್ಮ ಲಾಭಕ್ಕೆ ಬಳಸಿಕೊಳ್ಳುತ್ತಿರುವುದು ದುರದೃಷ್ಟಕರ. ಪರಿಶಿಷ್ಟ ಜಾತಿಯವರ ಒಳ ಮೀಸಲಾತಿಯ ಕೆನೆ ಪದರುವಿನಂತೆ ಹಿಂದುಳಿದ ವರ್ಗಗಳ ಮೀಸಲಾತಿಯ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪು ಕೆನೆ ಪದರು ಪರಿಕಲ್ಪನೆಯನ್ನು ರೂಪಿಸಿದೆ. ಕೆನೆ ಪದರು ಎಂದರೆ ಮೀಸಲಾತಿ ಸೌಲಭ್ಯ ಪಡೆಯುವ ವರ್ಗದಲ್ಲಿ ಆರ್ಥಿಕವಾಗಿ ಶೈಕ್ಷಣಿಕವಾಗಿ ಮುಂದುವರಿದವರು ಎಂದರ್ಥೈಸಬಹುದು.

ಯಾವುದೇ ಸಮುದಾಯದಲ್ಲಿ ಆರ್ಥಿಕವಾಗಿ ತೀರ ಹಿಂದುಳಿದಿರುವವರು ಮತ್ತು ತಕ್ಕಮಟ್ಟಿಗೆ ಆರ್ಥಿಕವಾಗಿ ಸುಧಾರಣೆಗೊಂಡ ಕುಟುಂಬಗಳು ಇರುವುದು ಸಹಜ. ಸರ್ಕಾರದ ಸೌಲಭ್ಯಗಳು ನಿರ್ದಿಷ್ಟವಾದ ಕುಟುಂಬಗಳಿಗೆ ಅಂದರೆ ಆರ್ಥಿಕವಾಗಿ ದುರ್ಬಲರಿಗೆ ನೇರವಾಗಿ ತಲುಪಬೇಕಾದರೆ ಅದೇ ಸಮುದಾಯದ

ಆರ್ಥಿಕವಾಗಿ ಸಬಲರನ್ನು ದೂರ ಇಡಬೇಕಾದದು ಅತ್ಯಂತ ಅಗತ್ಯ. ಇಲ್ಲದಿದ್ದರೆ ಪ್ರಬಲರೆ ಸರ್ಕಾರದ ಸೌಲಭ್ಯಗಳನ್ನು ಮತ್ತೆ ಮತ್ತೆ ಪಡೆದುಕೊಳ್ಳುತ್ತಾರೆ. ಒಟ್ಟಾರೆ ಕೆನೆ ಪದರು ಎಂದರೆ ಆರ್ಥಿಕ ಸದೃಢರನ್ನು ಹೊರಗಿಟ್ಟು ದುರ್ಬಲರನ್ನು ಮೇಲೆತ್ತುವ ವ್ಯವಸ್ಥೆ ಎನ್ನಬಹುದು.

ಒಟ್ಟಾರೆ ಶತಶತಮಾನಗಳಿಂದ ದೌರ್ಜನ್ಯ ಶೋಷಣೆಗೊಳಗಾಗಿರುವ ಈ ತಳ ಸಮುದಾಯಗಳಿಗೆ ಸ್ವಾತಂತ್ರ್ಯ ಬಂದ ನಂತರವೇ ಶಿಕ್ಷಣ ಪಡೆಯಲು ಅವಕಾಶ ಪ್ರಾಪ್ತವಾಗಿದೆ. ಈಗಿನ ಶಿಕ್ಷಣ ಪಡೆಯಲು ಮುನ್ನುಗ್ಗುತ್ತಿರುವ ಈ ತಳ ಸಮುದಾಯಗಳು ಇನ್ನೂ ಹಲವಾರು ಕ್ಷೇತ್ರಗಳನ್ನು ಮುಟ್ಟಲು ಸಹ ಸಾಧ್ಯವಾಗಿಲ್ಲ. ತಾಂತ್ರಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣ, ಕಂಪ್ಯೂಟರ್ ಶಿಕ್ಷಣ ಮತ್ತು ವಾಣಿಜ್ಯೋದ್ಯಮಗಳಿಂದ ಇನ್ನು ಬಹುದೂರ ಉಳಿದಿವೆ. ದೇಶದ ಎಲ್ಲಾ ಕಡೆಗಳಲ್ಲಿ ಅಸಮಾನತೆ ತುಂಬಿರುವಾಗ ಹಿಂದುಳಿದ ಜಾತಿಗಳಲ್ಲಿ ಮಾತ್ರ ಸಮ ಸಮಾಜ ಸೃಷ್ಟಿಸುತ್ತಿದ್ದೇನೆ ಎಂದು ಹೇಳುತ್ತಿರುವುದು ಹುಸಿ ಕಲ್ಪನೆ ಅಷ್ಟೇ. ದೇಶದ ಎಲ್ಲಾ ಸಮುದಾಯಗಳ ಜನಸಂಖ್ಯೆ ಅನುಗುಣವಾದ ಮೀಸಲಾತಿ ಸೌಲಭ್ಯ ಎಷ್ಟು ದೊರೆಯಬೇಕಾಗಿತ್ತು ಅಷ್ಟು ಇಂದಿಗೂ ದೊರೆತಿಲ್ಲ. ಹೀಗಾಗಿ ಹತ್ತು ವರ್ಷಕ್ಕೊಮ್ಮೆ ನಡೆಯುವ ಜನಗಣತಿ ಇದನ್ನು ಸಮರ್ಥಿಸುತ್ತದೆ.

## ಪರಾಮರ್ಶನ ಗ್ರಂಥಗಳು:


1. ಮಹೇಶ್ ಸಿ. ಕೆ. , (2000), ಅಂಬೇಡ್ಕರ್ ಮತ್ತು ಮೀಸಲಾತಿ ವರ್ಗೀಕರಣ, ವಿಮೋಚನ ಪ್ರಕಾಶನ, ಚಿತ್ರದುರ್ಗ.
2. ಲಿಂಗಪ್ಪ ಹೆಚ್. , (2005), ಡಾಕ್ಟರ್ ಬಿ ಆರ್ ಅಂಬೇಡ್ಕರ್ ರವರ ಸಾಮಾಜಿಕ, ಆರ್ಥಿಕ, ರಾಜಕೀಯ ನೆಲೆಗಳು, ರಶ್ಮಿ ಪ್ರಕಾಶನ, ಬೆಂಗಳೂರು.
3. ಅಂಬೇಡ್ಕರ್ ಬಿ. ಆರ್. (ಮೂಲ), ವಿವಿಧ ಲೇಖಕರು (ಅನು), (2012), ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
4. ಮಹೇಶ್ ಸಿ. ಕೆ. , (2002), ಮೀಸಲಾತಿ ಮತ್ತು ಭವಿಷ್ಯದ ಪಥಗಳು, ವಿಮೋಚನ ಪ್ರಕಾಶನ, ಚಿತ್ರದುರ್ಗ.
5. ಸಣ್ಣರಾಮ, (2008), ಅಂಬೇಡ್ಕರ್ ಮತ್ತು ಮೀಸಲಾತಿ, ಪ್ರೀತಮ್ ಪ್ರಕಾಶನ, ಶಿವಮೊಗ್ಗ.
6. ಜಾಫೆಟ್ ಎಸ್. , (2015), ಅಂಬೇಡ್ಕರ್ ಚಿಂತನೆಗಳ ಪ್ರವೇಶಿಕೆ, ಸಂಚಾಲಕರು ಡಾ. ಬಿ.ಆರ್. ಅಂಬೇಡ್ಕರ್ 125ನೇ ಜಯಂತಿಯ ವರ್ಷಾಚರಣೆಯ ಅಂತರಾಷ್ಟ್ರೀಯ ಸಮ್ಮೇಳನಾ ಆಯೋಜನಾ ಸಮಿತಿ, ಬೆಂಗಳೂರು.
7. ನಾಗ ಮೋಹನ್ ದಾಸ್ ಎಚ್. ಎನ್. , (2018), ಸಂವಿಧಾನ ಓದು, ಸಹಯಾನ, ಕೆರೆಕೋಣ.
8. ಅಂಜನಪ್ಪ ಕೆ. , (2007), ಅಂಬೇಡ್ಕರ್ ಮತ್ತು ಅಸ್ಪೃಶ್ಯತೆ, ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
9. ಇಂದಿರ ಕೃಷ್ಣಪ್ಪ (ಸಂ), (2010), ಪ್ರೊಫೆಸರ್ ಬಿ. ಕೃಷ್ಣಪ್ಪನವರ ಬರಹಗಳು ಮತ್ತು ಭಾಷಣಗಳು: ಭಾಗ–2, ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4. 0 International License.